# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 209 (225 + 226) |
| ಸದಸ್ಯರ ಹೆಸರು | : | ಶ್ರೀ. ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ-ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 09.12.2025. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಅಕಾಲಿಕ ಮತ್ತು ವಾಡಿಕೆಗಿಂತ ಅತೀ ಹೆಚ್ಚು ಮಳೆ ಸುರಿದ ಕಾರಣದಿಂದ ಸಾಕಷ್ಟು ಅಡಿಕೆ ಮರಗಳು ನಾಶವಾಗಿದ್ದು, ಅಡಿಕೆ ಬೆಳೆಗಾರರು ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಅತ್ಯಧಿಕ ಮಳೆ ಸುರಿದ ಹಿನ್ನೆಲೆಯಲ್ಲಿ ಎಷ್ಟು ಅಡಿಕೆ ಮರಗಳು ಹಾನಿಗೊಳಗಾಗಿವೆ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) | 2025-26 ನೇ ಸಾಲಿನಲ್ಲಿ ಅತಿವೃಷ್ಠಿಯಿಂದಾಗಿ ಹಾನಿಗೊಳಗಾಗಿರುವ ಅಡಿಕೆ ಮರಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ. |

| ಕ್ರ. ಸಂ. | ತಾಲ್ಲೂಕು | ಹಾನಿಗೊಳಗಾಗಿರುವ ಅಡಿಕೆ ಮರಗಳು (ಸಂಖ್ಯೆಗಳಲ್ಲಿ) |
|---|---|---|
| 1. | ಮಂಗಳೂರು | 588245 |
| 2. | ಬಂಟ್ವಾಳ | 867790 |
| 3. | ಬೆಳ್ತಂಗಡಿ | 2006550 |
| 4. | ಪುತ್ತೂರು | 155715 |
| 5. | ಸುಳ್ಯ | 502018 |
| 6. | ಕಡಬ | 10290 |
| 7. | ಮೂಡಬಿದ್ರೆ | 1955100 |
| 8. | ಮುಲ್ಕಿ | 377300 |
| 9. | ಉಳ್ಳಾಲ | 50298 |
| | ಒಟ್ಟು | 6513306 |

<table>
<tr>
<td>ಇ)</td>
<td>ಅಡಿಕೆಗೆ ಕೊಳೆರೋಗ ವ್ಯಾಪಕವಾಗಿ ಹರಡಿ ಶೇ.70 ಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದ್ದು, ಈ ಸಂಬಂಧ ವೈಜ್ಞಾನಿಕವಾದ ಸರ್ವೆ ಮಾಡಿ ಅಡಿಕೆ ಬೆಳೆಗಾರರಿಗೆ ಸೂಕ್ತ ಹಾಗೂ ಅರ್ಹ ಮೊತ್ತದ ಪರಿಹಾರವನ್ನು ಈಗಾಗಲೇ ನೀಡಲಾಗಿದೆಯೇ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)</td>
<td>ಅಡಿಕೆ ಕೊಳೆರೋಗ ನಿಯಂತ್ರಿಸಲು ತೋಟಗಾರಿಕೆ ಇಲಾಖೆಯಿಂದ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿವೆ:<br>
1. ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯಡಿ ಅಡಿಕೆ ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ಘಟಕ ವೆಚ್ಚದಡಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗೆ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.1,500 ಗಳಂತೆ 2 ಹೆಕ್ಟೇರ್ ವರೆಗೆ ರೂ.3,000 ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ.15.00 ಲಕ್ಷಗಳು ನಿಗಧಿಯಾಗಿದ್ದು, ಈವರೆಗೂ ರೂ. 9.23813 ಲಕ್ಷ ಸಹಾಯಧನವನ್ನು 485 ಫಲಾನುಭವಿಗಳಿಗೆ ಪಾವತಿಸಲಾಗಿರುತ್ತದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ತಾಲ್ಲೂಕು</th><th>ನೀಡಲಾದ ಸಹಾಯಧನ (ರೂ. ಲಕ್ಷಗಳಲ್ಲಿ)</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>1.</td><td>ಮಂಗಳೂರು</td><td>0.30850</td><td>23</td></tr>
<tr><td>2.</td><td>ಮೂಡಬಿದ್ರೆ</td><td>0.95194</td><td>18</td></tr>
<tr><td>3.</td><td>ಮುಲ್ಕಿ</td><td>0.00000</td><td>0</td></tr>
<tr><td>4.</td><td>ಉಳ್ಳಾಲ</td><td>0.07607</td><td>6</td></tr>
<tr><td>5.</td><td>ಬಂಟ್ವಾಳ</td><td>1.76669</td><td>93</td></tr>
<tr><td>6.</td><td>ಪುತ್ತೂರು</td><td>1.27470</td><td>74</td></tr>
<tr><td>7.</td><td>ಕಡಬ</td><td>1.08833</td><td>77</td></tr>
<tr><td>8.</td><td>ಸುಳ್ಯ</td><td>2.05320</td><td>60</td></tr>
<tr><td>9.</td><td>ಬೆಳ್ತಂಗಡಿ</td><td>1.71870</td><td>134</td></tr>
<tr><td></td><td>ಒಟ್ಟು</td><td>9.23813</td><td>485</td></tr>
</table>
2. ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿ ಬೆಳೆವಿಮೆ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲ ಅಡಿಕೆ ಬೆಳೆಯು ಅಧಿಸೂಚಿತವಾಗಿದ್ದು, ಹವಾಮಾ ವೈಪರೀತ್ಯದಿಂದ ಬೆಳೆ ನಷ್ಟ ಸಂಭವಿಸಿದಲ್ಲಿ ಸದ ಯೋಜನೆಯಡಿ ನಷ್ಟ ಪರಿಹಾರವನು ಒದಗಿಸಲಾಗುತ್ತಿದೆ. ಅಡಿಕೆ ಬೆಳೆ ವಿಮೆ ವಿವರ ಈ ಕೆಳಕಂಡಂತಿವೆ.
<table>
<tr><th>ಕ್ರ. ಸಂ.</th><th>2024-2025 ನೇ ಸಾಲಿನ ಬೆಳೆ ವಿಮೆ ವಿವರ</th><th>ದಕ್ಷಿಣ ಕನ್ನಡ ಜಿಲ್ಲೆ</th></tr>
<tr><td>1.</td><td>ಅರ್ಜಿಗಳ ಸ್ವೀಕೃತ (ಸಂಖ್ಯೆ)</td><td>242550</td></tr>
<tr><td>2.</td><td>ವಿಸ್ತೀರ್ಣ (Covered) ಹೆಕ್ಟೇರ್ ಗಳಲ್ಲಿ</td><td>55637</td></tr>
</table>
</td>
</tr>
</table>

| | | |
|---|---|---|
| 3. | ವಿಮಾ ಮೊತ್ತ (Sum insured) (Amount in Lakhs) | 71216.58 |
| 4. | ಪಾವತಿಸಲಾದ ವಿಮಾ ಮೊತ್ತ (Claim amount in Lakhs) | 14185.53 |
| 5. | ಫಲಾನುಭವಿಗಳ ಸಂಖ್ಯೆ | 139423 |
| 6. | 2025-2026 ನೇ ಸಾಲಿನ ಬೆಳೆ ವಿಮೆ ಅರ್ಜಿಗಳ ಸ್ವೀಕೃತ (ಸಂಖ್ಯೆ) | 296068 |

3. ಅಡಿಕೆ ಬೆಳೆಯ ಕೊಳೆರೋಗದ ಲಕ್ಷಣ ಹಾಗೂ ನಿರ್ವಹಣೆ ಕ್ರಮಗಳ ಕುರಿತು ಇಲಾಖಾ ಅಧಿಕಾರಿಗಳ ವತಿಯಿಂದ ರೈತರ ತಾಕುಗಳಿಗೆ ಭೇಟಿ ನೀಡಿ ನಿರ್ವಹಣೆ ಕ್ರಮಗಳ ಕುರಿತು 8 ತರಬೇತಿ ಹಾಗೂ ಪ್ರಾತ್ಯಕ್ಷತೆ ಕಾರ್ಯಕ್ರಮಗಳನ್ನು ಕೈಗೊಂಡು 760 ರೈತರಿಗೆ ಮಾಹಿತಿ ನೀಡಲಾಗಿರುತ್ತದೆ.
4. ಹಿಂದಿನ ಸಾಲಿನಲ್ಲಿ ಬೆಳೆ ಹಾನಿಯಾಗಿರುವ ಅಂದಾಜು 79,123.67 ಹೆಕ್ಟೇರ್ ಪ್ರದೇಶಕ್ಕೆ ಪ್ರತಿ ಹೆಕ್ಟೇರ್ ಗೆ NDRF/SDRF ಮಾರ್ಗಸೂಚಿಯನ್ವಯ ರೂ.22,500/-ಗಳಂತೆ ಅಡಿಕೆ ಕೊಳೆ ರೋಗ ಬಾಧಿತ ರೈತರಿಗೆ ಪರಿಹಾರ ಒದಗಿಸಲು ಕೇಂದ್ರ ಸರ್ಕಾರಕ್ಕೆ ರೂ.178.03 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.
5. ಪ್ರಸಕ್ತ ಸಾಲಿಗೆ ಅಡಿಕೆ ಬೆಳೆಗೆ ರೋಗಗಳು ಹಾಗೂ ಪೋಷಕಾಂಶಗಳ ಸಮಗ್ರ ನಿರ್ವಹಣೆಗೆ ಒಟ್ಟಾರೆ ರೂ.57776.33 ಲಕ್ಷಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಿ MIDH ಮಾರ್ಗಸೂಚಿಯನ್ವಯ ಶೇ.30 ರ ಸಹಾಯಧನದಂತೆ ಕೇಂದ್ರ ಪಾಲು ರೂ.10399.74 ಲಕ್ಷಗಳು ಹಾಗೂ ರಾಜ್ಯ ಪಾಲು ರೂ.6933.14 ಲಕ್ಷಗಳ ಒಟ್ಟು ರೂ. 17332.90 ಲಕ್ಷಗಳ ಅನುಸಾರ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.
6. ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ತಜ್ಞರು ಹಾಗೂ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಕೈಪಿಡಿ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅಡಿಕೆ ಬೆಳೆಗಾರರಿಗೆ ಬೆಳೆ ಹಾನಿಗೆ ಪರಿಹಾರ ನೀಡುವ ಕಾರ್ಯಕ್ರಮ ತೋಟಗಾರಿಕೆ ಇಲಾಖೆಯಲ್ಲಿ ಇರುವುದಿಲ್ಲ.

ಈ) ನೀಡಿದ್ದಲ್ಲಿ, ಜಿಲ್ಲೆಯಲ್ಲಿ ಒಟ್ಟು ಎಷ್ಟು ಪ್ರಮಾಣದಲ್ಲಿ ಬೆಳೆ ಹಾನಿ ಸಂಭವಿಸಿದೆ; ಹಾಗೂ ವಿತರಿಸಿರುವ ಪರಿಹಾರದ ವಿವರಗಳೇನು: ವಿತರಣೆ ಮಾಡುವುದು ಇನ್ನೂ ಬಾಕಿ ಇದೆಯೇ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ವಿತರಣೆ ಮಾಡಲಾಗುವುದು;
(ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು).

ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾಗಿ ಹಾನಿಗೊಳಗಾಗಿರುವ ಅಡಿಕೆ ಬೆಳೆಗೆ ಒಟ್ಟು ರೂ.8.60130 ಲಕ್ಷಗಳ ಪರಿಹಾರದನವನ್ನು ಒದಗಿಸುವಂತೆ ಕಂದಾಯ ಇಲಾಖೆಗೆ ಶಿಫಾರಸ್ಸು ಮಾಡಲಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

| **ಕ್ರ. ಸಂ.** | **ತಾಲ್ಲೂಕು** | **ಅತಿವೃಷ್ಟಿಯಿಂದಾಗಿ ಹಾನಿಗೊಳಗಾಗಿರುವ ಅಡಿಕೆ ಬೆಳೆಯ ವಿಸ್ತೀರ್ಣ(ಹೆ)** | **ಶಿಫಾರಸ್ಸು ಮಾಡಲಾದ ಮೊತ್ತ (ರೂ. ಲಕ್ಷಗಳಲ್ಲಿ)** |
|---|---|---|---|
| 1 | ಮಂಗಳೂರು | 1.362 | 0.33845 |
| 2 | ಬಂಟ್ವಾಳ | 11.405 | 3.27945 |
| 3 | ಬೆಳ್ತಂಗಡಿ | 0.000 | 0.00000 |
| 4 | ಪುತ್ತೂರು | 4.224 | 1.32360 |
| 5 | ಸುಳ್ಯ | 0.223 | 0.10000 |
| 6 | ಕಡಬ | 8.354 | 2.25960 |
| 7 | ಮೂಡಬಿದ್ರೆ | 0.720 | 0.16450 |
| 8 | ಮುಲ್ಕಿ | 0.000 | 0.00000 |
| 9 | ಉಳ್ಳಾಲ | 4.338 | 1.13570 |
| | **ಒಟ್ಟು** | **30.626** | **8.60130** |

ಕಂದಾಯ ಇಲಾಖೆಯಿಂದ NDRF/SDRF ಮಾರ್ಗಸೂಚಿಯನ್ವಯ ಬೆಳೆ ನಷ್ಟ ಪರಿಹಾರ ವಿತರಿಸಲಾಗುತ್ತದೆ.

ಉ) ಅಡಿಕೆ ಮರ ನಾಶವಾಗಿರುವ ರೈತರಿಗೆ ಮರು ನಾಟಿ ಮಾಡಲು ಕೇರಳ ಮಾದರಿಯಲ್ಲಿ ಸಹಾಯಧನ ನೀಡಬೇಕು ಎಂಬ ಬೇಡಿಕೆ ತೀವ್ರವಾಗಿದ್ದು, ಸರ್ಕಾರ ಈ ಕುರಿತು ಸೂಕ್ತ ಕ್ರಮವಹಿಸಿದೆಯೇ; ಹಾಳಾಗಿರುವ ಅಡಿಕೆ ತೋಟಗಳ ಪುನಃಶ್ಚೇತನಕ್ಕೆ ಸರ್ಕಾರ ಪೂರಕ ಕ್ರಮಗಳನ್ನು ಕೈಗೊಂಡಿದೆಯೇ? (ವಿವರ ನೀಡುವುದು).

ಅಡಿಕೆ ಮರ ನಾಶವಾಗಿರುವ ರೈತರಿಗೆ ಮರು ನಾಟಿ ಮಾಡಲು ಕೇರಳ ಮಾದರಿಯಲ್ಲಿ ಸಹಾಯಧನ ನೀಡುವ ಕುರಿತಾದ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

**ಸಂಖ್ಯೆ: HORTI 523 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**